ಆ ಗೌಜು ಬೇಡ್ವೇಬೇಡ ಅನ್ನಿಸ್ತು. ಇಲ್ಲಿ ತಣ್ಣಗಿದೀವಿ' ತಲೆ ಕೆಡಿಸಿಟ್ಟು ಹೋದವರಿಗೆ ಮುಫತ್ತಾಗಿ ಒಂದು ಲೋಟ ಕಾಫಿಯ ನೈವೇದ್ಯ. ಇನ್ನು ಊರಿಗೆ ಹೋದ ಮೇಲೆ ವೆಂಕಟರಾಮನವರೆಗೆ ಸುದ್ದಿ ಹೋಗುತ್ತದೆ. ನಮ್ಮನೆ ಕೊಟ್ಟಿಗೆಗಿಂತ ಅತ್ತತ್ತ, ಅಂತಾ ಮನೆ... ಅನ್ನುವ ಸುದ್ದಿ. ಊರಿನ ಪೈಕಿಯ ಯಾರಾದರೂ ಮನೆಗೆ ಬಂದು ಹೋದ ದಿನ ಶಿವರಾಮ ತನ್ನ ಮೇಲೆ ಹರಿಹಾಯುವುದು ಶತಸ್ಸಿದ್ಧ ಎಂದು ಅನುಭವದಿಂದ ಕಂಡುಕೊಂಡಿದ್ದಳು ಸೀತಾಲಕ್ಷ್ಮಿ.

***

ಪ್ರಸನ್ನ ಮೂರ್ನಾಲ್ಕು ತಿಂಗಳಿಗೆ ಒಮ್ಮೆಯಾದರೂ ಮುಖ ತೋರಿಸಿ ಹೋಗುತ್ತಿದ್ದ. ಅದೆಲ್ಲಿಂದ ವಕ್ಕರಿಸಿಕೊಂಡಿತೋ ಕೊರೊನಾ ಎಂಬ ಹೆಮ್ಮಾರಿ, ದಿನಕ್ಕೊಂದು ಹೇಳಿಕೆ, ದಿನಕ್ಕೊಂದು ಕಟ್ಟುಪಾಡು, ಮುಖಗವುಸು ಇಲ್ಲದೆ ಹೊರಗೆ ಕಾಲಿಟ್ಟರೆ ದಂಡ. ವಿನಾಕಾರಣ ಊರಿಂದೂರಿಗೆ ಹೋಗುವುದಕ್ಕೂ ನಿಷೇಧ ಹೇರಿತು ಸರ್ಕಾರ. ಮದುವೆ, ಮುಂಜಿ, ನೂರಾರು ಸಂಖ್ಯೆಯಲ್ಲಿ ಜನ ಸೇರುವ ಎಲ್ಲಾ ಕಾರ್ಯಕ್ರಮಗಳಿಗೂ ನಿರ್ಬಂಧ. ವ್ಯಾಪಾರ, ವಹಿವಾಟುಗಳಿಗೆ ಸಮಯ ನಿಗದಿ. ವಾರಾಂತ್ಯಗಳಲ್ಲಿ ಅತ್ಯಗತ್ಯ ವಸ್ತುಗಳದ್ದಲ್ಲದೆ ಉಳಿದ ಯಾವ ಅಂಗಡಿಯೂ ತೆರೆಯುವಂತಿಲ್ಲ. ಜನ ಮನೆಯಿಂದಾಚೆ ಓಡಾಡುವಂತಿಲ್ಲ. ಪಾರ್ಕುಗಳು, ದೇವಸ್ಥಾನಗಳಿಗೆ ಬೀಗ. ಅಗತ್ಯ ಖರೀದಿಗೆ ಹೋದಾಗಲೂ ಅಂತರ ಕಾಪಾಡಿಕೊಂಡು ದೂರ ದೂರ ನಿಲ್ಲಬೇಕಾದ ಕಟ್ಟುಪಾಡು. ಕಟ್ಟಡ ಕಾಮಗಾರಿಗಳು ನಿಂತುಹೋದವು. ಹೋಟೆಲು, ಥಿಯೇಟರುಗಳು ಬಾಗಿಲು ಮುಚ್ಚಿದುವು. ಹೊಟ್ಟೆಪಾಡಿಗೆ ಪಟ್ಟಣಕ್ಕೆ ವಲಸೆ ಹೋದ ಜನ ಕೆಲಸ ಕಳೆದುಕೊಂಡು ಸಾವಿರ ಸಾವಿರ ಸಂಖ್ಯೆಯಲ್ಲಿ ಹುಟ್ಟೂರಿಗೆ ವಾಪಸಾದರು. ಖಾಸಗಿ ಕಂಪನಿಗಳು ತಮ್ಮ ನೌಕರರಿಗೆ ಮನೆಯಲ್ಲೇ ಕೆಲಸ ಮಾಡುವ ನಿಯಮ ರೂಪಿಸಿದುವು. ಈ ಸವಲತ್ತನ್ನು ಉಪಯೋಗಿಸಿಕೊಂಡು ಕೆಲವರು ಹುಟ್ಟೂರಿಗೆ ವಾಪಸಾಗಿ ಅಲ್ಲಿಂದಲೇ ಕೆಲಸ ಮಾಡತೊಡಗಿದರು. ಶಾಲಾ ಕಾಲೇಜುಗಳು ಬಾಗಿಲು ಮುಚ್ಚಿ ಮನೆಯಲ್ಲೇ ಕೂತು ಪಾಠ ಕೇಳುವ ವ್ಯವಸ್ಥೆ ಜಾರಿಗೆ ಬಂತು. ಮನೆಗೆ ಏನು ತಂದರೂ, ಎಲ್ಲಿಂದ ತಂದರೂ ಸಾಂಕ್ರಾಮಿಕ ರೋಗದ ವೈರಾಣು ಯಾವುದರಲ್ಲಿ ಅಡಗಿ ಕೂತು ಮನೆಯೊಳಗೆ ಪ್ರವೇಶ ಮಾಡುವುದೋ ಎನ್ನುವ ಭೀತಿ. ತರಕಾರಿಗಳನ್ನು ಸೋಪು ನೀರಲ್ಲಿ ತೊಳೆಯುವವರಿದ್ದರು. ಉಪ್ಪು ನೀರಲ್ಲಿ ನೆನೆ ಹಾಕಿ ಉಪಯೋಗಿಸುವವರಿದ್ದರು. ಅಂಗಡಿಯಿಂದ ತಂದ ಸಾಮಾನುಗಳು ತಕ್ಷಣ ಸೇರಬೇಕಾದ ಡಬ್ಬಿ ಸೇರದೆ ಅಸ್ಪೃಶ್ಯವಾಗಿ ದೂರ ಉಳಿಯುತ್ತಿದ್ದುವು. ಏನು ಮುಟ್ಟಿದರೂ ಕೈ ತೊಳೆಯುವ ಗೀಳು ಹತ್ತಿಕೊಂಡು ಅಂಗೈ ಗೆರೆಗಳು ಮಾಸತೊಡಗಿದುವು. ಯಾರನ್ನು ನೋಡಿದರೂ ಹಿಂಜರಿಕೆ. ಯಾರೊಡನೆ ಮಾತಾಡುವುದಕ್ಕೂ ಹಿಂಜರಿಕೆ. ಯಾರ ಮೂಲಕ ಕೊರೊನಾ ಅಂಟಿಬಿಡುವುದೋ ಎನ್ನುವ ಹೆದರಿಕೆ. ಜನ ಒಬ್ಬರ ಮನೆಗೊಬ್ಬರು ಭೇಟಿ ಕೊಡುವುದು ನಿಂತುಹೋಯ್ತು. ದೂರದರ್ಶನದಲ್ಲಿ ದಿನ ಮೂರು ಹೊತ್ತೂ ಇದೇ ಪ್ರಸಾರ, ಇದೇ ಪ್ರಚಾರ. ಆ ದಿನ ಎಷ್ಟೆಷ್ಟು ಜನರು ಕೊರೊನಾ ಪೀಡಿತರಾದರು ಮತ್ತು ಎಷ್ಟು ಜನರು ಅಸು ನೀಗಿದರು ಎನ್ನುವ ಎದೆ ಝಲ್ಲೆನಿಸುವ ವಿವರ. ಕಾಯಿಲೆ ಅಂಟಿದವರಿರುವ ಮನೆಗಳಿಗೆ, ವಸತಿ ಸಮುಚ್ಚಯಗಳಿಗೆ ಅಲ್ಲಿನ ಜನ ಹೊರ ಬಾರದಂತೆ ಅಡ್ಡಪಟ್ಟಿಯ ತಡೆ. ಜನಸಂಪರ್ಕವಿಲ್ಲದೆ ವಾರಗಟ್ಟಲೆಯ ಕಡ್ಡಾಯ ಏಕಾಂತವಾಸ. ಆ ಕಡೆ ತಿರುಗಿ ನೋಡುವುದಕ್ಕೂ ಜನರಿಗೆ ಭಯ. ಯಾವ ಕಾರಣದಿಂದ ಮೈ ಬೆಚ್ಚಗಾದರೂ, ಸೀನಿದರೂ, ಕೆಮ್ಮಿದರೂ ಕೊರೊನಾ ಕಾರಣವಾಗಿರಬಹುದೇ ಎನ್ನುವ ಅಂಜಿಕೆಯಿಂದ ಜನ ಕಂಗೆಟ್ಟರು. ಆಸ್ಪತ್ರೆಗಳಲ್ಲಿ ಹಾಸಿಗೆ ಖಾಲಿಯಿಲ್ಲದೆ ಬೆಡ್ ಹುಡುಕಿಕೊಂಡು ಆಸ್ಪತ್ರೆಗಳಿಂದ ಆಸ್ಪತ್ರೆಗಳಿಗೆ ಅಲೆದಾಡುವಾಗಲೇ ಅಸು ನೀಗಿದವರು ನೂರಾರು ಜನ. ಉಸಿರಾಡಲು ಆಮ್ಲಜನಕದ ವ್ಯವಸ್ಥೆಯಾಗದೆ ಪ್ರಾಣ ತೆತ್ತವರು ಮತ್ತಷ್ಟು. ಹುಳುಗಳಂತೆ ಸಾಯುತ್ತಿದ್ದರು ಜನ. ಉಸಿರು ತೆಗೆದುಕೊಳ್ಳಲು ಸಾಧ್ಯವಾಗದೆ ಪ್ರಾಣ ಬಿಡುತ್ತಿದ್ದರು. ಸತ್ತವರ ಮುಖ ನೋಡುವುದಕ್ಕೂ ಮನೆಯವರಿಗೆ ಆಸ್ಪದವಿಲ್ಲ. ರಕ್ಷಣೆಯ ಭದ್ರ ಕವಚದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿ ಸಾಮೂಹಿಕವಾಗಿ ಅಂತ್ಯಸಂಸ್ಕಾರ ನೆರವೇರಿಸುತ್ತಿದ್ದರು. ಒಂದೊಮ್ಮೆ ಕಟ್ಟೆಚ್ಚರಿಕೆಯ ನಡುವೆ ಅಂತ್ಯಸಂಸ್ಕಾರ ನಡೆದರೂ ಮನೆಯವರೆಲ್ಲರೂ ಭಾಗವಹಿಸುವಂತಿಲ್ಲ. ಕೈಯ ಬೆರಳೆಣಿಕೆಯಷ್ಟು ಜನಕ್ಕೂ ಅವಕಾಶವಿಲ್ಲ. ಕೊರೊನಾ ಪೀಡಿತರಿಗೇ ಆಸ್ಪತ್ರೆಗಳಲ್ಲಿ ಸ್ಥಳಾವಕಾಶವಿಲ್ಲದಿದ್ದಾಗ ಇನ್ನುಳಿದ ರೋಗಿಗಳು ಅನಿವಾರ್ಯವಾಗಿ ಆಸ್ಪತ್ರೆಯಿಂದ ದೂರ ಉಳಿಯಬೇಕಾದ ಪರಿಸ್ಥಿತಿ. ಎಲ್ಲಿ ನೋಡಿದರೂ ಬಿಗುವಿನ ವಾತಾವರಣ. ಖಾಲಿ ಹೊಡೆಯುವ ರಸ್ತೆಗಳು. ಮನೆಯೊಳಗೇ ಕೂತು ಜಡ್ಡು ಹಿಡಿಸಿಕೊಳ್ಳುತ್ತಿದ್ದ ಮಕ್ಕಳು, ಮುದುಕರು. ಕೌಟುಂಬಿಕ ದೌರ್ಜನ್ಯ ಹೆಚ್ಚಾಗಿ ಈ ಕಾರಣದಿಂದ ನ್ಯಾಯಾಲಯದ ಮೆಟ್ಟಿಲೇರುವವರ ಸಂಖ್ಯೆ ಈ ಸಂಕ್ರಮಣ ಕಾಲದಲ್ಲಿ ಯಾವತ್ತಿಗಿಂತ ಹೆಚ್ಚಾಗಿದೆ ಅನ್ನುತ್ತಿತ್ತು ವರದಿ.

'ಎಚ್ಚರಿಕೆ. ಎಲ್ಲಿಗೂ ಹೋಗ್ಬೇಡಿ. ಬೇಕಾದ ಸಾಮಾನು ಒಂದೇ ಸಲ ತಂದಿಟ್ಕೊಂಡ್ಬಿಡಿ. ಹೊರಗಡೆಯಿಂದ ತಂದ ಏನನ್ನೇ ಮುಟ್ಟಿದ್ರೂ ಕೈ ತೊಳೀರಿ...' ಫೋನ್ ಮಾಡಿದಾಗಲೆಲ್ಲಾ ಎಚ್ಚರಿಸುತ್ತಿದ್ದ ಪ್ರಸನ್ನ.

'ನೀವು ಹುಷಾರು ಮಾರಾಯಾ. ನಮ್ಮ ಕತೆ ಬಿಡು. ನಮಗೆ ಏನಾದ್ರೂ ಪರ್ವಾಗಿಲ್ಲ...' ಅನ್ನುತ್ತಿದ್ದಳು ಸೀತಾಲಕ್ಷ್ಮಿ. ಪಟ್ಟಣದ ಮಂದಿ ಸ್ವಂತ ಊರು ಸೇರಿಕೊಳ್ಳುವುದಕ್ಕೂ ಎಷ್ಟೆಲ್ಲಾ ಅಡೆತಡೆಗಳು. ಪಟ್ಟಣ ಅಂದರೆ ಕಾಯಿಲೆಯ ತವರು ಎಂದು ಹಳ್ಳಿಯವರ ಭಾವನೆ. ಅಲ್ಲಿಂದ ಬೀಜ ತಂದು ಇಲ್ಲಿ ಬಿತ್ತೇಡಿ ಎಂದು ಸ್ವಂತ ಊರಿಗೆ ಬಂದವರನ್ನು ಒಳಗೆ ಬಿಟ್ಟುಕೊಳ್ಳದೆ ಮುಳ್ಳು, ಕಲ್ಲು ಅಡ್ಡ ಹಾಕಿ ದಾರಿ ಮುಚ್ಚಿ ಕಾವಲಿಗೆ ನಿಂತುಕೊಂಡ ಹಳ್ಳಿಗಳಿದ್ದುವು. ಪಟ್ಟಣದ ಬಾಡಿಗೆ ಮನೆಗಳು ಖಾಲಿ ಹೊಡೆಯುತ್ತಿದ್ದುವು. ಹಳ್ಳಿಗಳ ಜನಸಂಖ್ಯೆ ಏರತೊಡಗಿತ್ತು. ಮನೆಯಿಂದ ಕೆಲಸ ಮಾಡುವ ಪ್ರಸನ್ನ ಅಪ್ಪ, ಅಮ್ಮ ಇರುವ ಊರಿಗೆ ಬರುವಂತಿಲ್ಲ. ಅವನ ಕೆಲಸಕ್ಕೆ ಬೇಕಾದ ವ್ಯವಸ್ಥೆ ಈ ಬಡಪಾಯಿಗಳ ಮನೆಯಲ್ಲಿಲ್ಲ. ಕರ್ಫ್ಯೂ ಸಡಿಲಿಕೆಯಾಗಿ ಊರಿಂದೂರಿಗೆ ಪ್ರಯಾಣ ಮಾಡಲು ಅನುಮತಿ ತತ್ಕಾಲಕ್ಕೇನಾದ್ರೂ ಸಿಕ್ಕಿದರೆ ರಸ್ತೆ ರಸ್ತೆಗಳಲ್ಲಿ ವಾಹನಗಳ ದಟ್ಟಣೆ. ಒಟ್ಟಿನಲ್ಲಿ ಜಗತ್ತೇ ಅಲ್ಲೋಲಕಲ್ಲೋಲವಾಗಿತ್ತು. 'ಪ್ರಳಯ ಅಂದರೆ ಇನ್ನೇನು? ಸರ್ವನಾಶ' ಎಂದು ಜನ ಅರ್ಥೈಸತೊಡಗಿದ್ದರು.

ಎಷ್ಟು ಸಾವು, ಎಷ್ಟು ನೋವು. ಹೆತ್ತವರನ್ನು ಕಳೆದುಕೊಂಡು ಅನಾಥರಾದ ಮಕ್ಕಳು. ದುಡಿಯುವ ಕೈಗಳನ್ನು ಕಳೆದುಕೊಂಡು ಬೀದಿಪಾಲಾಗುವ ಪರಿಸ್ಥಿತಿಯಲ್ಲಿರುವ ಕುಟುಂಬ. ಎಲ್ಲರ ಮನೆಯ ಅಡುಗೆಯನ್ನೂ ರುಚಿ ನೋಡಿದ ಬಕಾಸುರನಂತೆ ಮನೆ ಮನೆಯನ್ನೂ ಹೊಕ್ಕು ಹೊರಡುತ್ತಿದ್ದ ಕೊರೊನಾಸುರ. ಅವನ ಕಬಂಧಬಾಹುಗಳಿಂದ ತಪ್ಪಿಸಿಕೊಂಡವರಿಗೆ ಪುನರ್ಜನ್ಮ ಪಡೆದ ಅನುಭವ. ಆದರೂ ಅದರ ಅಡ್ಡ ಪರಿಣಾಮಗಳಿಂದ ನಾನಾ ಸಂಕಷ್ಟ. ಗ್ರಹಚಾರ ಕೆಟ್ಟು ಖಾಯಿಲೆ ಬಂದರೆ ಲಕ್ಷಗಟ್ಟಲೆಯ ಖರ್ಚು. 'ಅವರಿಗೆ ಅಷ್ಟು ಲಕ್ಷ ಖರ್ಚಾಯ್ತಂತೆ, ಇವರಿಗೆ ಇಷ್ಟು ಲಕ್ಷ' ಎನ್ನುವ ವದಂತಿ ಕೇಳಿಯೇ ಬೆವರುತ್ತಿದ್ದರು ಜನ. ಅಷ್ಟೆಲ್ಲಾ ಖರ್ಚು ಮಾಡಿಯೂ ಆಯುಷ್ಯ ಇದ್ದವರು ಬದುಕಿಕೊಂಡರು. ಇಲ್ಲದವರು ಸ್ವರ್ಗದ ಹಾದಿ ಹಿಡಿದರು. 'ಕಾಯಿಲೆ ಗೀಯಿಲೆ ಬಂದ್ರೆ ನಮ್ಹತ್ರ ಇರೋ ದುಡ್ಡು ಕಡ್ಲೆಪುರಿ. ಸಾಯೋದೇ ವಾಸಿ' ಅಂದುಕೊಳ್ಳುತ್ತಿದ್ದ ಶಿವರಾಮ. ಅದು ಹೇಗೆ ಈ ಅನಿಸಿಕೆಯನ್ನು ಗ್ರಹಿಸಿದ್ದನೋ, ಅಮ್ಮನೊಡನೆ ಹೇಳಿದ್ದ ಪ್ರಸನ್ನ.

'ನೀವೇನು ಹೆದರ್ಕಂಬೇಡಿ. ನಮಗೆಲ್ಲಾ ಇನ್ಶೂರೆನ್ಸ್ ಇದೆ. ಎಷ್ಟು ಖರ್ಚು ಬಂದ್ರೂ ಹೆದರಿಕೆ ಇಲ್ಲ...'

'ನಮಗೂ'

'ಹೂಂ ಮತ್ತೆ...'

ಶಿವರಾಮನಿಗೆ ಏನೆನಿಸಿತ್ತೋ ಸೀತಾಲಕ್ಷ್ಮಿಗೆ ಗೊತ್ತಿಲ್ಲ. ಅವಳಿಗಂತೂ ಅಯ್ಯಬ್ಬಾ... ಅನಿಸಿತ್ತು. ಆದರೂ ಅಂಥ ಸಂದರ್ಭ ಬರದಿರಲಿ ಎಂದು ಅವಳು ಹಾರೈಸಿದ್ದಳು.

ಹಳ್ಳಿ ಹಳ್ಳಿಗೂ ವ್ಯಾಪಿಸತೊಡಗಿತ್ತು ಮಹಾಮಾರಿ. ಹಳ್ಳಿ ಜನ ಅಂದುಕೊಂಡಿದ್ದು ಸತ್ಯ ಅನ್ನುವ ಹಾಗೆ ಪಟ್ಟಣದಿಂದ ಬಂದವರ್ಯಾರೋ ರೋಗದ ವಾಹಕರಾಗಿರುತ್ತಿದ್ದರು. ಅಥವಾ ಹಳ್ಳಿಯಿಂದ ಪೇಟೆಗೆ ಕಾರ್ಯ ನಿಮಿತ್ತ ಹೋಗಲೇಬೇಕಾದ ಸಂದರ್ಭ ಬಂದಾಗ ಅಲ್ಲಿಂದ ಬೆನ್ನು ಹತ್ತಿ ಬಂದಿರುತ್ತಿತ್ತು ಹೆಮ್ಮಾರಿ. ಇಡೀ ಪ್ರಪಂಚ ಹೀಗೆ ತಲ್ಲಣಗೊಂಡಿರುವಾಗ ಸೀತಾಲಕ್ಷ್ಮಿಗೆ ಏನೋ ಒಂದು ರೀತಿಯ ನೆಮ್ಮದಿ ಅನಿಸತೊಡಗಿದ್ದಕ್ಕೆ ಸಕಾರಣ ಇತ್ತು. ತಮ್ಮೂರಿನವರೋ, ಇಲ್ಲಿನ ಪರಿಚಯಸ್ಥರೋ ಯಾವುದೋ ಸಮಾರಂಭಕ್ಕೆ ಅಕ್ಷತೆಬಟ್ಟಲು ಹಿಡಿದು ಕರೆಯಲು ಬರುವುದು